# ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
## ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆ: 06/2016

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ದೇವರಾಜ್ | **ಪಿಡಬ್ಲ್ಯೂ.18** |
| **ತಂದೆಯ ಹೆಸರು** | : | ರಾಮಲಿಂಗಪ್ಪ | **ಸಿಡಬ್ಲ್ಯೂ.44** |
| **ವಯಸ್ಸು** | : | **45** ವರ್ಷ | **ಪ್ರಮಾಣ ವಚನ ಬೋಧಿಸಿದ** |
| **ಉದ್ಯೋಗ** | : | ತೋಟಗಾರಿಕೆ ಉಪ ನಿರ್ದೇಶಕರು , ಬೆಂಗಳೂರು ಅರ್ಬನ್ | **ದಿನಾಂಕ: 16.01.2019.** |
| **ವಾಸಸ್ಥಳ** | : | ಬೆಂಗಳೂರು . | |

## ಎಸ್‌ಪಿಪಿ ರವರಿಂದ: ಮುಖ್ಯ ವಿಚಾರಣೆ:

ದಿ: 18.07.2013 ರಿಂದ 25.06.2016 ರ ವರೆಗೆ ನಾನು ಚಿತ್ರದುರ್ಗದ ತೋಟಗಾರಿಕೆ ಇಲಾಖೆಯಲ್ಲಿ ತೋಟಗಾರಿಕೆ ಉಪ ನಿರ್ದೇಶಕರು ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ . ಚಿತ್ರದುರ್ಗ ಲೋಕಾಯುಕ್ತ ಪೊಲೀಸರು ನಮ್ಮ ಕಚೇರಿಗೆ ದಿ: 11.06.2014 ರಂದು ಪತ್ರ ಬರೆದು ಆರೋಪಿಗೆ ಸಂಬಂಧಿಸಿದ ಹೂವಿನಹೊಳೆ ಗ್ರಾಮದ ಸರ್ವೆ ನಂ. 62/2 ರಲ್ಲಿ ಸಸಿ ನೆಡಲು , ಗುಂಡಿ ತೋಡಲು ಮಾಡಿದ ಖರ್ಚು ವೆಚ್ಚದ ಬಗ್ಗೆ ವಿವರ ಕೇಳಿದ್ದರು . ಆ ಪತ್ರವನ್ನು ಗುರುತಿಸುತ್ತೇನೆ . ಅದನ್ನು ನಿಪಿ: 34 ಅಂತ ಗುರುತಿಸಲಾಯಿತು . ಆ ಪ್ರಕಾರ ನಾನು ಹಿರಿಯ ತೋಟಗಾರಿಕಾ ಸಹಾಯಕ ನಿರ್ದೇಶಕರು , ಹಿರಿಯೂರು ಇವರಿಗೆ ಸದರಿ ಜಮೀನಿನಲ್ಲಿ ತೆಂಗು , ಅಡಿಕೆ ಬೆಳೆ ಬೆಳೆಯಲು ಮಾಡಿದ ಖರ್ಚು, ವಿವರ ಕೇಳಿ ಪತ್ರ ಬರೆದಿದ್ದೆನು.

2. ಆ ಪ್ರಕಾರ ಹಿರಿಯೂರು ಸಹಾಯ ತೋಟಗಾರಿಕಾ ಅಧಿಕಾರಿ ಇವರು ನಮ್ಮ ಕಚೇರಿಗೆ ದಿ: 11.02.2015 ರಂದು ಪತ್ರ ಬರೆದು ವಿವರ ಕೊಟ್ಟಿರುತ್ತಾರೆ. ಅದನ್ನು ನಿಪಿ: 35 ಅಂತ ಗುರುತಿಸಲಾಯಿತು . ಸದರಿ ವರದಿ ಪ್ರಕಾರ ಆರೋಪಿ ತನ್ನ ಜಮೀನು ಸರ್ವೆ

ನಂ. 62/2 ಕ್ಷೇತ್ರ 6 ಎಕರೆಯಲ್ಲಿ ಅಡಿಕೆ , ತೆಂಗು ಬೆಳೆ ಬೆಳೆದು ಖರ್ಚು ಮಾಡಿದ ವಿವರ ಈ ಕೆಳಗಿನಂತಿದೆ .

| ಕ್ರಮ ಸಂಖ್ಯೆ | ವಿವರ | ಮರಗಳ ಸಂಖ್ಯೆ | ಖರ್ಚು (ರೂ.ಗಳಲ್ಲಿ ) |
|---|---|---|---|
| 1 | ಅಡಿಕೆ ಬೆಳೆಗೆ ತಗುಲಿದ ವೆಚ್ಚ | 2640 ಗಿಡ | 4,71,794.40 |
| 2 | ತೆಂಗು ಬೆಳೆಗೆ ತಗುಲಿದ ವೆಚ್ಚ | 81 ಗಿಡ | 52,933.50 |
| 3 | ಹನಿ ನೀರಾವರಿ ಖರ್ಚು | | 1,59,435/- |
| 4 | ಇಲಾಖೆ ಸಹಾಯ ಧನ ರೂ.63,080/- ಕಳೆದು ರೈತರಿಂದ ಭರಿಸಿದ ವೆಚ್ಚ | | 96,355/- |
| | | ಒಟ್ಟು | 6,21,082/- |

ಸದರಿ ವರದಿಯನ್ನು ನಾನು ಪತ್ರದೊಂದಿಗೆ ದಿಃ 12.02.2015 ರಂದು ಲೋಕಾಯುಕ್ತ ಪೊಲೀಸರಿಗೆ ಕಳುಹಿಸಿಕೊಟ್ಟಿರುತ್ತೇನೆ . ಅದನ್ನು ನಿಪಿಃ 36 ಅಂತ ಗುರುತಿಸಲಾಯಿತು . ಸದರಿ ತೆಂಗು, ಅಡಿಕೆ ಬೆಳೆಗಳನ್ನು 2011 ರಲ್ಲಿ ಹಾಕಿರುತ್ತಾರೆ . ಆ ಬೆಳೆಗಳಿಂದ ಇನ್ನು ಯಾವುದೇ ಆದಾಯ ಬಂದಿರುವುದಿಲ್ಲ . ಏಕೆಂದರೆ ಅವು 4 ವರ್ಷದ ಮರಗಳಾಗಿದ್ದವು . ನಿಪಿಃ 35 ವರದಿ ಸರಿ ಇರುತ್ತದೆ .

## ಆರೋಪಿತರ ಪರ ಶ್ರೀ ಎಸ್.ಪಿ.ಹೆಚ್./ಎನ್.ಟಿ.ಆರ್. ವಕೀಲರಿಂದಃ ಪಾಟೀ ಸವಾಲುಃ

3. ಹೂವಿನಹೊಳೆ ಗ್ರಾಮದ ಸರ್ವೆ ನಂ. 62/2 ನೇದ್ದಕ್ಕೆ ನಾನು ಖುದ್ದಾಗಿ ಭೇಟಿ ಕೊಟ್ಟಿಲ್ಲ . ನಮ್ಮ ಹಿರಿಯ ಸಹಾಯಕ ತೋಟಗಾರಿಕಾ ಅಧಿಕಾರಿ , ರೈತ ಸಂಪರ್ಕ ಕೇಂದ್ರ ಧರ್ಮಪುರ ಹೋಬಳಿ ಹಿರಿಯೂರು ತಾ . ಇವರು ಸ್ಥಳಕ್ಕೆ ಹೋಗಿ ಬಂದು ವರದಿ ಕೊಟ್ಟಿದ್ದಾರೆ . ಸರ್ವೆ ನಂ. 62/2 ರಲ್ಲಿ ಎಷ್ಟು ತೆಂಗು , ಎಷ್ಟು ಅಡಿಕೆ ಬೆಳೆದಿದ್ದಾರೆ ಅಂತ ನನಗೆ ಖುದ್ದಾಗಿ ಮಾಹಿತಿ ಇಲ್ಲ . ನಮ್ಮ ಅಧಿಕಾರಿಗಳು ಕೊಟ್ಟ ವರದಿ ಪ್ರಕಾರ ಸಾಕ್ಷಿ

ಹೇಳಿದ್ದೇನೆ . ನಾನು ಸ್ಥಳಕ್ಕೆ ಹೋಗಲಾರದೆ ಆ ವರದಿ ಸರಿಯೋ , ತಪ್ಪೋ ಅಂತ ಹೇಳಲಿಕ್ಕೆ ಬರುತ್ತದೆ . ಏಕೆಂದರೆ ನಮ್ಮ ಅಧಿಕಾರಿ ವಾಸ್ತವಾಂಶದ ಪ್ರಕಾರ ವರದಿ ಕೊಟ್ಟಿದ್ದಾರೆ . ಹಿರಿಯ ಸಹಾಯಕ ತೋಟಗಾರಿಕಾ ಅಧಿಕಾರಿ ಸ್ಥಳಕ್ಕೆ ಹೋಗಿದ್ದಾರೆ ಅಂತ ತೋರಿಸಲು ದಾಖಲೆ ಹಾಜರು ಮಾಡಿರುವುದಿಲ್ಲ . ಅಲ್ಲಿ ತೆಂಗು , ಅಡಿಕೆ ಗಿಡಗಳಿಗೆ ಹನಿ ನೀರಾವರಿ ಪದ್ಧತಿ ಮಾಡಿದ್ದಾರೆ . ನಮ್ಮ ಧರ್ಮಪುರ ಹೋಬಳಿ ಹಿರಿಯೂರು ತಾಲ್ಲೂಕು ಅಧಿಕಾರಿ ಸ್ಥಳಕ್ಕೆ ಹೋಗುವ ಕಾಲಕ್ಕೆ ಆರೋಪಿತರಿಗೆ ಲಿಖಿತ ನೋಟೀಸು ಕೊಟ್ಟಿರಲಿಲ್ಲ .

4. ಸರ್ವೆ ನಂ. 62/2 ರಲ್ಲಿ ತೆಂಗು , ಅಡಿಕೆ ಮಧ್ಯದಲ್ಲಿ ಮತ್ತೆ ಏನು ಬೆಳೆ ಬೆಳೆದಿದ್ದರು ಅಂತ ನನಗೆ ಗೊತ್ತಿರುವುದಿಲ್ಲ . ನಾನು ಸರ್ವೆ ನಂ. 62/2 ಕ್ಕೆ ಖುದ್ದಾಗಿ ಹೋಗಿ ಬೆಳೆಗಳನ್ನು ಪರಿಶೀಲಿಸಿಲ್ಲ ಎನ್ನುವುದು ನಿಜ . ಸಾಕ್ಷಿ ಹೇಳುತ್ತಾರೆ ನಮ್ಮ ಅಧಿಕಾರಿ ಕೊಟ್ಟ ವರದಿ ನೋಡಿ ಕೋರ್ಟಿಗೆ ಹಾಜರು ಮಾಡಿದ್ದೇನೆ . ಬೆಳೆಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ . ನಮ್ಮ ದರ್ಮಪುರ ಹೋಬಳಿ ಅಧಿಕಾರಿ ಸ್ಥಳಕ್ಕೆ ಹೋಗಿಲ್ಲ ಎನ್ನುವುದು ಸುಳ್ಳು . ನಾನು ಹೇಳುವಂತೆ ರೂ. 6,21,082/– ಹಣ ಖರ್ಚಾಗಿರುವುದಿಲ್ಲ ಎನ್ನುವುದು ಸುಳ್ಳು . ಸದರಿ ಬೆಳೆ ಬೆಳೆಯಲು ನಮ್ಮ ಇಲಾಖೆಯಿಂದ ರೂ. 63,080/– ಹಣ ಸಬ್ಸಿಡಿ ಕೊಡಲಾಗಿದೆ . ಅದನ್ನು ಕೂಡ ನಾವು ಒಟ್ಟು ಹನಿ ನೀರಾವರಿ ಖರ್ಚಿನ ಹಣದಲ್ಲಿ ಕಳೆದಿದ್ದೇವೆ . ವಾರ್ಷಿಕ ಬೆಳೆಗಳು ಅಂದರೆ ಸೊಪ್ಪು , ತರಕಾರಿ , ಈರುಳ್ಳಿ ಬೆಳೆಗಳ ಲಾಭವನ್ನು ಆದಾಯ ಅಂತ ಪರಿಗಣಿಸಬಾರದು ಅಂತ ಗೈಡ್ ಲೈನ್ಸ್ ಇದೆ ಎನ್ನುವುದು ನಿಜ . ಸರ್ವೆ ನಂ. 62/2 ರಲ್ಲಿ ನಾನು ಹೇಳುವಂತೆ ರೂ. 6,21,082/– ಖರ್ಚು ಮಾಡಿಲ್ಲ ಎನ್ನುವುದು ಸುಳ್ಳು . ನಾನು ಸ್ಥಳ ಪರಿಶೀಲನೆ ಮಾಡದೇ ಇದ್ದುರಿಂದ ನಿಪಿಃ 35 ವರದಿ ಸರಿಯೋ , ತಪ್ಪೋ ಅಂತ ನನಗೆ ಹೇಳಲು ಬರುವುದಿಲ್ಲ ಎನ್ನುವುದು ಸುಳ್ಳು .

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.